ಮತ್ತು ನಾನು ನಿಂತು ಆಕೆಯನ್ನು ಸುಧಾರಿಸುತ್ತಿದ್ದೆವು. ಮಾವನೂ ಅಕ್ಕನ ಬಗ್ಗೆ ತುಂಬಾ ಮರುಗುತ್ತಿದ್ದರು. ಅದರ ಜೊತೆಗೆ ನನ್ನ ಬಗ್ಗೆಯೂ ಏನೋ ಅವರ ಮುಖದಲ್ಲಿ ಚಿಂತೆಯ ಗೆರೆಗಳು ಕಾಣಿಸುತ್ತಿದ್ದವು.

ಊರಿನಲ್ಲಿ ಸಿದ್ದೇಗೌಡರು ನಮ್ಮ ಮಾವನ ಆತ್ಮೀಯ ಸ್ನೇಹಿತರಾಗಿದ್ದರು. ಮೊದಲಿನಿಂದಲೂ ಅವರಿಬ್ಬರಲ್ಲಿಯೂ ಪರಸ್ಪರ ಆತ್ಮೀಯತೆ, ವಿಶ್ವಾಸ ಮತ್ತು ಪ್ರೀತಿ ತುಂಬಿ ತುಳುಕಾಡುತ್ತಿದ್ದುದನ್ನು ನಾನು ಚಿಕ್ಕಂದಿನಿಂದಲೂ ಗಮನಿಸಿದ್ದೆ. ಅವರು ಮನೆಗೆ ಬಂದಾಗಲೆಲ್ಲಾ ಮಲಗಿರುವ ಅಕ್ಕನ ಮಾತನಾಡಿಸಿ, 'ಧೈರ್ಯವಾಗಿರಿ. ಏನೂ ಆಗಲ್ಲ' ಎಂದು ಧೈರ್ಯ ತುಂಬುತ್ತಿದ್ದರು. ಆದರೆ, ಅಕ್ಕ ದಿನೇ ದಿನೇ ಸಣ್ಣಗಾಗುತ್ತಿರುವುದನ್ನು ಕಂಡು ಯಾರೋ ಶುಗರ್ ಇರಬಹುದು ಒಮ್ಮೆ ಪರೀಕ್ಷೆ ಮಾಡಿಸಿ ನೋಡಿ ಎಂದು ಸಲಹೆ ಕೊಟ್ಟರು. ಅದರಂತೆ ಮತ್ತೆ ಆಸ್ಪತ್ರೆಗೆ ಹೋಗಿ ಅಕ್ಕನನ್ನು ಪರೀಕ್ಷೆ ಮಾಡಿಸಲಾಗಿ ಅಕ್ಕನಿಗೆ ಶುಗರ್ ಇದೆ ಎಂದು ವೈದ್ಯರು ಹೇಳಿ ಮಾತ್ರೆಗಳನ್ನು ಬರೆದುಕೊಟ್ಟು ಆಹಾರದಲ್ಲಿ ಪಥ್ಯೆಯನ್ನು ಅನುಸರಿಸಲು ಹೇಳಿದರು. ಜೊತೆಗೆ ವಾಕ್ ಮಾಡಬೇಕೆಂದೂ ಹೇಳಿ ಕಳಿಸಿದರು. ಆದರೆ, ಅಕ್ಕನಿಗೆ ನಡೆಯಲು ಆಗುತ್ತಿರಲಿಲ್ಲ. ಹಾಗಾಗಿ ಅವಳಿಗೆ ವಾಕಿಂಗ್ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ.

ಅಕ್ಕನಿಗೆ ದೈಹಿಕ, ಮಾನಸಿಕ ಎರಡೂ ಕಾಯಿಲೆಗಳು ಒಕ್ಕರಿಸಿ ದಿನೇ ದಿನೇ ಕೊರಗುತ್ತ ಸೊರಗಿಹೋದಳು. ಹಾಗೂ ಈ ಮಧ್ಯೆ ಮಾವ ಅನೇಕ ವೈದ್ಯರಿಗೆ, ಆಸ್ಪತ್ರೆಗೆ ಅಕ್ಕನನ್ನು ಕರೆದುಕೊಂಡು ಹೋಗಿ ತೋರಿಸಿ ಬಂದರೂ ಅವಳಿಗೆ ಗುಣವಾಗುವಂತೆ ಕಾಣಲಿಲ್ಲ. ಮಾವ ಹೊಲ ಮನೆಯ ಕಡೆ ಆಸೆ ಬಿಟ್ಟು ಅಕ್ಕನನ್ನೇ ನೋಡಿಕೊಳ್ಳುವುದೇ ಆಯ್ತು. 'ಮಾವನಿಗೆ ಉಷಾರಿಲ್ಲ ಬಾ' ಅಂತ ನನ್ನನ್ನು ನನ್ನವ್ವನ ಮನೆಯಿಂದ ಕರೆದುಕೊಂಡು ಬಂದ ಅಕ್ಕ, ಈಗ ನೋಡಿದರೆ ಅವಳೇ ಕಾಯಿಲೆ ಬಿದ್ದು ಮಲಗಿಬಿಟ್ಟಳು. ಮಾವ ಹೊಲ, ಗದ್ದೆಯನ್ನು ಊರಿನಲ್ಲಿ ಭೈರಣ್ಣನಿಗೆ ಪಾಲಿಗೆ ಕೊಟ್ಟು, ಇನ್ನು ನನ್ನಿಂದ ವ್ಯವಸಾಯ ಮಾಡಿಸಲು ಆಗಲ್ಲ ಅಂಥ ಹೇಳಿ ಅಕ್ಕನ ನೋಡಿಕೊಳ್ಳುವುದರಲ್ಲೇ ಸುಸ್ತಾಗಿ ಹೋದರು. ಮಾವ ಇನ್ನು ಅಕ್ಕನ ಮೇಲಿನ ಆಸೆ ಬಿಟ್ಟು, 'ಅವಳು ಬದುಕಿದಷ್ಟು ದಿನ ಚೆನ್ನಾಗಿ ತಿಂದು ಉಂಡು ಬದುಕಿರಲಿ, ಅವಳು ಏನೇನು ಕೇಳ್ತಾಳೆ ಅದನ್ನೆಲ್ಲಾ ಅಚ್ಚುಕಟ್ಟಾಗಿ ನೀನು ಮಾಡಿಕೊಡು' ಎಂದು ನನಗೆ ಒಂದು ದಿನ ಅಕ್ಕನಿಗೆ ಕೇಳಿಸದಂತೆ ಹೇಳಿದ್ದರು.

ಮಾವನಿಗೆ ಅಕ್ಕ ಇನ್ನು ಬದುಕುವುದಿಲ್ಲ ಎಂಬುದು ಖಾತ್ರಿಯಾದಂತಿತ್ತು. ಅಕ್ಕನಿಗೆ ಕಾಯಿಲೆಗಳ ಮೇಲೆ ಕಾಯಿಲೆಗಳು ಸುತ್ತಿಕೊಂಡವು. ಈಚೆಗೆ ಅವಳು ಏನು ತಿಂದರೂ ಅರಗುತ್ತಿರಲಿಲ್ಲ. ತಿಂದದ್ದು ತಿಂದ ಹಾಗೇ ಒಮ್ಮೊಮ್ಮೆ ವಾಂತಿ, ಭೇದಿ ಎರಡೂ ಆಗುತ್ತಿತ್ತು. ಅಕ್ಕ 'ನಾನು ಯಾರಿಗೆ ಮೋಸ ಮಾಡಿದೆನೋ! ಕರ್ಮ ಮಾಡಿದೆನೋ! ಇದು ನನಗೆ ಎಲ್ಲಿಂದ ಬಂದು ಸುತ್ತಿಕೊಂಡಿತೋ?' ಎಂದು ವ್ಯಥೆ ಪಡುತ್ತಿದ್ದಳು. ನಾನು ಅಕ್ಕನಿಗೆ ನನ್ನ ಕೈಮೀರಿ ಸೇವೆ ಮಾಡುತ್ತಿದ್ದೆ. ಮಾವ ತಾವು ಹೈಸ್ಕೂಲ್‌ವರೆಗೆ ಓದಿದ್ದಂತೆ. ಅವರು ಕುಮಾರವ್ಯಾಸನ ಭಾರತ ಕಾವ್ಯವನ್ನು ಚೆನ್ನಾಗಿ ಓದುತ್ತಿದ್ದರು. ಈ ನಡುವೆ ಅವರು ಅದನ್ನು ಜಗುಲಿಯಲ್ಲಿ ಓದುತ್ತಾ ಕೂತು ಬಿಡುತ್ತಿದ್ದರು. ಬೀದಿಯಲ್ಲಿ ಹೋಗುವವರು ಅವರ ಬಳಿಗೆ ಬಂದು ಅವರ ಕಾವ್ಯದ ಓದನ್ನು, ಕಥೆಯನ್ನು ಕೇಳುತ್ತ ಕೂತುಬಿಡುತ್ತಿದ್ದರು. ನಾನು ಓದದೆ ಇದ್ದರೂ ಅವರು ಆ ಕಾವ್ಯವನ್ನು ಓದಿ ಅರ್ಥ, ಕಥೆ ಹೇಳುವುದು ನನಗೆ ಗೊತ್ತಾಗುತ್ತಿತ್ತು. ಅವರು ಕೌರವರಿಂದ ದ್ರೌಪದಿಗೆ ಆದ ಅವಮಾನ, ಅವಳು ಅದನ್ನು ಸಹಿಸಿಕೊಂಡು ಅದನ್ನು ಗೆದ್ದ ಅವಳ ಛಲ, ಶಕ್ತಿಯನ್ನು ಎಲ್ಲರಿಗೂ ಅರ್ಥವಾಗುವಂತೆ ಓದಿ ವಿವರಿಸುತ್ತಿದ್ದರು. ಕರ್ಣನಿಗೆ ದ್ರೋಣಾಚಾರ್ಯ ಹಾಗೂ ಶಲ್ಯ ಮಹಾರಾಜರು ಮಾಡಿದ ಜಾತಿ ಅವಮಾನದ ಪ್ರಸಂಗವನ್ನು, ಗಂಗಾನದಿ ತೀರದಲ್ಲಿ ಕುಂತಿ ಕರ್ಣನನ್ನು ಹಡೆದು ಲೋಕಾಪವಾದಕ್ಕೆ ಹೆದರಿ ಅದನ್ನು ಗಂಗಾನದಿಗೆ ಬಿಸಾಕಿದ ಸನ್ನಿವೇಶವನ್ನು, ಮಾವ ಎಲ್ಲರಿಗೂ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದರು. ಅಕ್ಕ ಒಳಗೆ ಮಲಗಿದ್ದರೂ ಅವಳೂ ಅದನ್ನು ಆಲಿಸುತ್ತಾ ಒಮ್ಮೊಮ್ಮೆ ಗೆಲುವಾಗುತ್ತಿದ್ದಳು. ಮತ್ತೆ ಮರುಕ್ಷಣದಲ್ಲಿ ತನ್ನ ಕಾಯಿಲೆಗಳಿಂದ ನರಳುತ್ತ ಖಿನ್ನಳಾಗುತ್ತಿದ್ದಳು. ಮಾವ ಇವತ್ತು ಭಾರತ ಓದುವುದಕ್ಕೆ ಕೂತವರೆ ಅಂಥ ಸುದ್ದಿ ಸಿಕ್ಕ ಕೂಡಲೇ ಸಿದ್ದೇಗೌಡರೂ ಬಂದು ಕೇಳುತ್ತಾ ಮಾವನ ಮುಂದೆ ಕೂತು ಬಿಡುತ್ತಿದ್ದರು. ಇದು ಹೀಗೇ ಆಗಾಗ ನಮ್ಮ ಜಗುಲಿಯಲ್ಲಿ ವಾರದಲ್ಲಿ ಒಂದೆರಡು ದಿನಗಳಲ್ಲಿ ನಡೆಯುತ್ತಲೇ ಇತ್ತು.

ಆದರೆ, ಒಂದು ಸರಿರಾತ್ರಿಯಲ್ಲಿ ಅಕ್ಕ ಮಲಗಿದ್ದಲ್ಲೇ